DAY & DATE: WEDNESDAY, OCTOBER 28th, 2026

Matter: BNMIT is Launching Centre of Excellence in Innovation in Deeptech & Clean Energy in association with GreenH2 India & New Energy Opportunities Limited (NEO) Australia

As appeared in the Newspapers:

PRAJAVANI
(Bengaluru Nagara, Page No. 3B)



ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನಾ ಸಮಾರಂಭದಲ್ಲಿ ಡಾ.ವಿವೇಕ್ ಕೊಂಬೆರಿ, ಅಕಿರಾ ತನಕ, ಜಯ್ ಸಿನ್ಹಾ, ಆಫಿರ್ ಅಮಾಮಿ, ಎಲಿಯಟ್ ಪಾರ್ಕರ್, ವಸಂತ್ ಪಲ್ಲಿಯತ್, ನಾರಾಯಣರಾವ್ ಆರ್. ಮಾನೆ, ಪ್ರೊ. ಟಿ.ಜೆ.ರಾಮಮೂರ್ತಿ, ಡಾ. ಎಸ್.ವೈ. ಕುಲಕರ್ಣಿ, ಪ್ರೊ. ಈಶ್ವರ್ ಎನ್. ಮಾನೆ, ಡಾ.ಜಿ. ಎನ್. ಕೃಷ್ಣಮೂರ್ತಿ ಭಾಗವಹಿಸಿದ್ದರು

ಸೆಂಟರ್ ಆಫ್ ಎಕ್ಸಲೆನ್ಸ್ ಆರಂಭ

ಬೆಂಗಳೂರು: ಬಿಎನ್‌ಎಂಐಟಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್‌ಎಂಐಟಿ), ಗ್ರೀನ್‌ಎಚ್2 ಇಂಡಿಯಾ ಮತ್ತು ಹೊಸ ಇಂಧನ ಅವಕಾಶಗಳ ಕಂಪನಿ (ನಿಯೋ) ಜೊತೆಗೂಡಿ ತನ್ನ ಕ್ಯಾಂಪಸ್‌ನಲ್ಲಿ 'ಡೀಪ್‌ಟೆಕ್ ಮತ್ತು ಕ್ಲೀನ್ ಎನರ್ಜಿ ಕ್ಷೇತ್ರದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಇನೋವೇಷನ್' ಅನ್ನು ಪ್ರಾರಂಭಿಸಿದೆ.

ಗ್ರೀನ್‌ಎಚ್2 ಇಂಡಿಯಾ ಕಂಪನಿಯ ಸಿಇಒ ಜಯ್ ಸಿನ್ಹಾ, ಬಿಎನ್‌ಎಂಐಟಿಯ ಅಧ್ಯಕ್ಷ ನಾರಾಯಣ ರಾವ್ ಆರ್.ಮಾನೆ ಅವರು ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಉದ್ಘಾಟಿಸಿದರು.

ಜಯ್ ಸಿನ್ಹಾ ಮಾತನಾಡಿ, 'ದೇಶದಲ್ಲಿ ಕ್ಲೀನ್ ಎನರ್ಜಿ ಮತ್ತು ಡೀಪ್ ಟೆಕ್ ಬಗ್ಗೆ ಹಲವಾರು ಸಂಶೋಧನೆಗಳು ಪ್ರಗತಿಯಲ್ಲಿವೆ. ನಾವು ಈ ಕ್ಷೇತ್ರದ ಬಗ್ಗೆ ಸಂಶೋಧನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಪ್ರೋತ್ಸಾಹಿಸುವ ಸಲುವಾಗಿ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರವನ್ನು ತೆರೆದಿದ್ದೇವೆ. ಇದರಿಂದ ವಿದ್ಯಾರ್ಥಿಗಳು ಮತ್ತು ಬೋಧಕರು ಸಂಶೋಧನೆ ನಡೆಸಬಹುದು. ಅವರ ಪ್ರಾಜೆಕ್ಟ್‌ಗಳನ್ನು ನಾವು ಉತ್ಪನ್ನವಾಗಿ ಪರಿವರ್ತಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಕಲ್ಪಿಸಿಕೊಡುತ್ತೇವೆ' ಎಂದರು.

'ಆಸ್ಟ್ರೇಲಿಯಾ, ಅಮೆರಿಕ ಮತ್ತು ಇಸ್ರೇಲ್ ಹೊರತುಪಡಿಸಿದರೆ, ಇದೇ ಮೊದಲ ಬಾರಿಗೆ ಭಾರತದಲ್ಲಿ ಈ ಕೇಂದ್ರವನ್ನು ನಮ್ಮ ಕಾಲೇಜಿನಲ್ಲಿ ತೆರೆಯಲಾಗಿದೆ. ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿರುವ ಕಂಪನಿಗಳು ಈ ಕೇಂದ್ರದ ಜತೆಗೆ ಸಹಯೋಗವನ್ನು ಮಾಡಿಕೊಂಡಿವೆ. ಇದರಿಂದ ಡೀಪ್‌ಟೆಕ್ ಮತ್ತು ಗ್ರೀನ್‌ಟೆಕ್ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಮಾಡಲು ಅವಕಾಶ ಕಲ್ಪಿಸಿ ಕೊಟ್ಟಂತಾಗುತ್ತದೆ' ಎಂದು ನಾರಾಯಣ ರಾವ್ ಆರ್.ಮಾನೆ ತಿಳಿಸಿದರು.